d) Self employment Schemes with the assistance of Scheduled Nationalised Commercial Bank.

e) Providing lighting facilities to Houses.

SRI MOHAMMAD MOINUDDIN.—Mr. Speaker, Sir I would like to know from the Hon. Minister, when exactly the Government will start a systematic survey of urban poor.

SRI A. LAKSHMISAGAR.—Government has appointed a Committee under the Chairmanship of Charless Korea to formulate urban policy in Karnataka. Among other things, this also is one of the points that would be considered by the Committee.

SRI MOHAMMAD MOINUDDIN.—Will the Hon. Minister kindly furnish as to exactly how many sites are being given, how many sites are already given and how many have been provided latrines.

SRI A. LAKSHMISAGAR.—I want separate notice.

ಅಧ್ಯಕ್ಷರು.—ಮತ್ತೊಮ್ಮೆ ಗೈರು ಹಾಜರಿಯಾದವರನ್ನು ಕರೆಯುತ್ತೇನೆ.

ಶ್ರೀ ಬಿ. ಮಾದೇಗೌಡರು.—ಸದಸ್ಯರು ಗೈರು ಹಾಜರಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂದ್ಯೂರಿಂ ಬಳಿ ಇರುವ ಬ್ರೂಕ್ ಬಾಂಡ್ ಕಾರ್ಖಾನೆಯನ್ನು ಮುಚ್ಚಿರುವುದಂ

೨೦೫೫. ಬಿ. ಆಪ್ಪಾಜಿಗೌಡ (ಮದ್ದೂರು).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ಬಳಿ ಇರುವ ಬ್ರೂಕ್ ಬಾಂಡ್ ಕಾರ್ಖಾನೆ ಮುಚ್ಚಿ ೬೫ ದಿನಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ದಿನಾಂಕ ೩-೬-೧೯೮೫ ರಂದು ಆಡಳಿತ ವರ್ಗದವರಿಗೆ ಒಂದು ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದ್ದರು. ಕಾರ್ಮಿಕ ಇಲಾಖೆಯ ಮುಂದೆ ನಡೆದ ಸಂಧಾನ ಸಭೆಯಲ್ಲಿ ಹಣಕಾಸಿನ ತೊಂದರೆಯಿಂದ ಈ ಬೇಡಿಕೆಗಳನ್ನು ಕೊನೇಪಕ್ಷ ಒಂದು ವರ್ಷದ ವರೆಗೆ ಮುಂದೂಡಬೇಕೆಂದು ಆಡಳಿತ ವರ್ಗದವರು ಕೇಳಿದ್ದಾರೆ. ಆದರೆ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಗಲೇ ಇತ್ಯರ್ಥ ಮಾಡಬೇಕೆಂದು ನಿಲುವು ತಾಳಿದ್ದಾರೆ ಈ ಮಧ್ಯೆ ದಿನಾಂಕ ೧೨-೧-೧೯೮೬ ರಿಂದ ಕೆಲಸಗಾರರು ಮುಷ್ಕರ ಹೂಡಿದ್ದಾರೆಂದು ತಿಳಿದುಬಂದಿದೆ. ಮೈಸೂರಿನ ಸಹಾಯಕ ಕಾರ್ಮಿಕ ಆಯುಕ್ತರು ವ್ಯಕ್ತಿ ಪ್ರವೇಶಿಸಿ ಸಂಧಾನ ಸಭೆಗಳನ್ನು ನಡೆಸುತ್ತಿದ್ದಾರೆ. ವಿವಾದವನ್ನು ಪರಿಹರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.